ಓ ಎಸ್ ನಂ. 69/2018 ಡಿ.ಡಬ್ಲೂ-1

ದಿನಾಂಕಃ 23-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ ರವರ ಪರ ಶ್ರೀ ಹೆಚ್ ಕೆ ಹೆಚ್ ವಕೀಲರಿಂದ,

1) ದಾವಾ ಸ್ವತ್ತುಗಳು ವಾದಿ ಮತ್ತು ನಮ್ಮಗಳ ಜಂಟಿ ಕುಟುಂಬದ ಸ್ವತ್ತುಗಳು ಆಗಿರುತ್ತವೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಿಡಿ-57 ದಾಖಲೆಯಂತೆ 1989 ರಲ್ಲಿ ಭಾಗ ಆಗಿರುತ್ತದೆ. ಅಸಲು ದಾವೆ ಸಂಖ್ಯೆ 366/1989 ರಲ್ಲಿ ನಾನು ವಾದ ಪತ್ರದಲ್ಲಿ ಭಾಗಾಂಶ ಕೋರಿ ದಾವೆ ಸಲ್ಲಿಸಿರುತ್ತೇನೆ. ಅಸಲು ದಾವೆ ಸಂಖ್ಯೆ 366/1989 ರಲ್ಲಿ ನನ್ನ ತಂದೆ ಸಲ್ಲಿಸಿರುವ ತರಕಾರು ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ತಕರಾರು ಪತ್ರದಲ್ಲಿ ನನ್ನ ತಂದೆ ಅವರ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದು ನಮೂದು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.

2) ಅಸಲು ದಾವೆ ಸಂಖ್ಯೆ 366/1989 ರಲ್ಲಿ ನಮೂದಿಸಿರುವ ಬಿ ಅನುಸೂಚಿ ಸ್ವತ್ತುಗಳು ನನ್ನ ಅತ್ತೆಯ ಸ್ವತ್ತುಗಳು ಎಂದರೆ ಸರಿಯಲ್ಲ. ನಿಡಿ-58 ರಾಜಿಪತ್ರವನ್ನು ಹೊರತು ಪಡಿಸಿ ಇತರೆ ಸ್ವತ್ತುಗಳ ಬಗ್ಗೆ ದಾಖಲೆಗಳು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಇತರೇ ಪ್ರತಿವಾದಿಗಳಿಗೆ ಸಂಬಂಧಸಿದ ದಾಖಲಾತಿಗಳನ್ನು ಹಾಜರುಪಡಿಸದೆ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ಇತರೆ ಪ್ರತಿವಾದಿಗಳಿಗೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

3) ನಾಗೇಗೌಡ 5 ನೇ ಪ್ರತಿವಾದಿ ವ್ಯವಸಾಯವನ್ನು ಹೊರತುಪಡಿಸಿ ಬೇರೆ ವೃತ್ತಿ ಮಾಡುವುದಿಲ್ಲ ಎಂದರೆ ಸರಿ. ನಾನು ಮತ್ತು 5 ನೇ ಪ್ರತಿವಾದಿ ವ್ಯವಸಾಯದಿಂದ ಜೀವನ ಮಾಡುತ್ತೇವೆ ಎಂದರೆ ಸರಿ. ದಾವಾ ಸ್ವತ್ತುಗಳ ಬರುವ ಆದಾಯದಿಂದ 5 ನೇ ಪ್ರತಿವಾದಿ ನಿಡಿ-59 ರಲ್ಲಿ ಕ್ರಯ ಪತ್ರದಲ್ಲಿರುವ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-69 ರಲ್ಲಿ ಹಕ್ಕು ಬಿಡುಗಡೆ ಪತ್ರದ ಬಗ್ಗೆ ನನಗೆ ಗೊತ್ತಿರುತ್ತದೆ.

ಸದರಿ ಪತ್ರದಲ್ಲಿರುವ ಖಂಡಿಕೆಗಳು ನನಗೆ ಗೊತ್ತಿರುತ್ತದೆ. ನಿಡಿ-60 ಹಕ್ಕು ಬಿಡುಗಡೆ ಪತ್ರದ ಮೂಲಕ ಮೀನಾಕ್ಷಿ ರವರಿಗೆ ಯಾವುದೇ ಆಸ್ತಿಗಳು ಹಕ್ಕು ವರ್ಗಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-60 ನಮ್ಮ ಕುಟುಂಬದ ಹಿರಿಯರ ಅಭಿಪ್ರಾಯದಂತೆ ತಿರ್ಮಾನ ಆಗಿರುತ್ತದೆ ಎಂದರೆ ಸರಿ. ನಾನು ಇತರೇ ಪ್ರತಿವಾದಿಗಳು ಕುಟುಂಬದ ಹಿರಿಯರು ಎಂದರೆ ಸರಿ. ನಿಡಿ-60 ರಲ್ಲಿ ನಮೂದು ಮಾಡಿರುವ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನಾನು ವಾದಿಗೆ ಮೋಸ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-69 ರಲ್ಲಿ ಹಕ್ಕು ಬಿಡುಗಡೆ ಪತ್ರವು ವಾದಿಯ ಭಾಗಾಂಶಕ್ಕೆ ಬದ್ಧ ಪಡಿಸುವುದಿಲ್ಲ ಎಂದರೆ ಸರಿಯಲ್ಲ.

4) ಅಸಲು ದಾವೆ ಸಂಖ್ಯೆ 366/1989 ರಲ್ಲಿ ವಾದಿಯನ್ನು ಪಕ್ಷಗಾರರನ್ನಾಗಿ ಮಾಡೆ ಮತ್ತು ನನ್ನ ತಂದೆಗೆ ಮಾಹಿತಿ ನೀಡದೆ ರಾಜಿ ಮಾಡಿಕೊಂಡಿರುತ್ತವೇ ಎಂದರೆ ಸರಿಯಲ್ಲ. ನನ್ನ ತಂದೆ ಅವಿದ್ಯಾಂತರ ಆಗಿದ್ದು, ರಾಜಿ ಅರ್ಜಿಯನ್ನು ಓದಿ ತಿಳಿದುಕೊಳ್ಳದೇ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ರಾಜಿ ಅರ್ಜಿಯಲ್ಲಿ ನಮೂದು ಮಾಡಿರುವ ವಿವರಗಳನ್ನು ತಿಳಿದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಇತರೆ ಪ್ರತಿವಾದಿಗಳು ದಾವೆಯನ್ನು ಮುಂದುವರೆಸುವ ಸಲುವಾಗಿ ರಾಜಿ ಅರ್ಜಿಗೆ ಸಹಿ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ 366/1989 ವಾದ ಪತ್ರದಲ್ಲಿ ನನ್ನ ತಂದೆಯನ್ನು ಕುಟುಂಬದ ಕರ್ತ ಎಂದು ನಮೂದು ಮಾಡಿರುತ್ತೇವೆ ಎಂದರೆ ಸರಿಯಲ್ಲ.

5) ನಿಡಿ-46, 50, 51 ಮತ್ತು 54 ಈ ದಾವೆಗೆ ಸಂಬಂಧಪಡದ ದಾಖಲಾತಿಗಳು ಎಂದರೆ ಸರಿಯಲ್ಲ. ನಿಡಿ-53 ಮ್ಯುಟೇಷನ್ ಪ್ರತಿಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-53 ಮ್ಯುಟೇಷನ್ ಪ್ರತಿಯ ಪ್ರಕಾರ ನನಗೆ ರಾಜಿ ಅರ್ಜಿಯಂತೆ ಹಕ್ಕು ವರ್ಗಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-53 ದಾಖಲೆಯನ್ನು ಕಂದಾಯ ಆಧಿಕಾರಿಯ ಜೊತೆ ಶಾಮಿಲಾಗಿ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

6) ನಿಡಿ-52 ಮ್ಯುಟೇಷನ್ ಪ್ರತಿಯನ್ನು ನನ್ನ ತಂದೆಯನ್ನು ಹೊರತುಪಡಿಸಿ ಇತರೇ ಪ್ರತಿವಾದಿಗಳು ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-49 ಮ್ಯುಟೇಷನ್ ಪ್ರತಿಯು ನನ್ನ ತಂದೆಯ ಕೋರಿಕೆಯ ಮೇರೆಗೆ ಬದಲಾವಣೆ ಆಗಿದೆ ಎಂದರೆ ಸರಿಯಲ್ಲ. ನಿಡಿ-46 ರಲ್ಲಿ ನಮೂದು ಮಾಡಿರುವ ಆಸ್ತಿಗಳು ನನ್ನ ಮತ್ತು ಪ್ರತಿವಾದಿ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನಿಡಿ-45 ರಲ್ಲಿರುವ ಆಸ್ತಿ ಒಟ್ಟು ಕುಟುಂಬದ ಪರವಾಗಿ ಖಾತೆ 5 ನೇ ಪ್ರತಿವಾದಿಗೆ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲಾತಿಗಳ ಪ್ರಕಾರ ನಾನು ಮತ್ತು ವಾದಿ ಜಂಟಿ ಸ್ವಾಧೀನದಲ್ಲಿ ಇದ್ದೇವೆ ಎಂದರೆ ಸರಿಯಲ್ಲ. ವಾದಿಯ ಹಾಜರುಪಡಿಸಿದ ದಾಖಾತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ಮುತ್ತಾತನ ಹೆಸರು ಉದ್ದೇಗೌಡ ಎಂದರೆ ಸರಿ.

7) ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನಿಪಿ-47 ಮತ್ತು 48 ದಾಖಲೆಗಳ ಪ್ರಕಾರ ದಾವಾ ಐಟಂ ನಂ. 1, 2 ಮತ್ತು 6 ಆಸ್ತಿಯ ನನ್ನ ತಂದೆ ಮತ್ತು ತಾತನ ಹೆಸರಿಗೆ ನಮೂದಾಗಿರುತ್ತವೆ ಎಂದರೆ ಸರಿಯಲ್ಲ. ನನ್ನ ತಾತ ತೀರಿಕೊಂಡ ನಂತರ ನನ್ನ ತಂದೆ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. 1989 ನೇ ಸಾಲಿನಲ್ಲಿ 30 ಅಥವಾ 34 ಆಗಿರುತ್ತದೆ. ದಾವಾ ಐಟಂ ನಂ. 1, 2 ಮತ್ತು 6 ನನ್ನ ತಂದೆಗೆ ನಿಪಿ-48 ದಾಖಲೆಗಳ ಪ್ರಕಾರ ಬಂದಿರುತ್ತವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು ಆಗಿದ್ದರೂ ಸಹ ವಾದಿಗೆ ಮೋಸ ಮಾಡಬೇಕೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತುಗಳಲ್ಲಿ ಭಾಗಂಶ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ